◆ **ನಿಜವಾದ ದಲಿತ, ಬಂಡಾಯ ಸಾಹಿತ್ಯ ಬಂದಿದೆ ಎಂದು ನಿಮಗೆ ಅನ್ನಿಸಿದೆಯೇ? ದಲಿತ ಬಂಡಾಯಕ್ಕೆ ಸಂಬಂಧಿಸಿದಂತೆ ಮುಟ್ಟಬೇಕಾದ ಅನುಭವ ಲೋಕಗಳು ಇನ್ನೂ ಇವೆಯೇ?**

ಸಾಕಷ್ಟು ಬಂದಿದೆ. ಗುರುತಿಸಿ ಒಪ್ಪುವ ಮನಸ್ಸುಗಳೇ ಇಲ್ಲ. ಇದು ಒಂದು ಕಡೆಯಾದರೆ, ಇನ್ನು ಗ್ರಾಮೀಣ ಭಾಗದ ತಳವರ್ಗದವರ ತಲ್ಲಣ, ಆತಂಕಗಳು ದೇಶಕ್ಕೆ ಸ್ವಾತಂತ್ರ್ಯ ದೊರಕಿ ಎಪ್ಪತ್ತು ವರ್ಷವಾದರೂ ಇನ್ನೂ ಕೊನೆಗೊಂಡಿಲ್ಲ. ಮಲ ಹೊರುವ ಪದ್ಧತಿ, ಜಾತೀಯತೆ, ಅಸ್ಪೃಶ್ಯತೆ ಜೀವಂತವಾಗಿವೆ. ಎಳೆ ಕೂಸುಗಳ ಮೇಲೆ, ವೃದ್ಧೆಯರ ಮೇಲೆ ಹಲ್ಲೆ, ಅತ್ಯಾಚಾರ ನಡೆಯುತ್ತಲೇ ಇದೆ. ಎಡೆ ಸ್ನಾನ, ಭೂತ ಪಿಶಾಚಿಗಳ ಕಾಟ, ಅಂಧಶ್ರದ್ಧೆ ಮೂಢನಂಬಿಕೆಯಿಂದ ಆಗುವ ಅಮಾನುಷ ಅಮಾನವೀಯ ಲೋಕದತ್ತಲೂ ನಮ್ಮ ಕಾವ್ಯ, ಇನ್ನಷ್ಟು ಪರಿಣಾಮಕಾರಿಯಾಗಿ ಬರೆಯಬೇಕಾಗಿದೆ. ಮಾತನಾಡಬೇಕಾಗಿದೆ.

◆ **ಕಲೆ ಎನ್ನವುದು ಅತ್ಯಂತ ನಿಷ್ಠುರವಾದದ್ದು. ಪಕ್ಷಪಾತವಿಲ್ಲದ ಕ್ಷೇತ್ರ. ಅನೇಕರು ಪ್ರಾದೇಶಿಕ ಹಿನ್ನೆಲೆಯನ್ನು ಅರ್ಹತೆಯನ್ನಾಗಿಟ್ಟುಕೊಂಡು ಅವಕಾಶಗಳನ್ನು ಪಡೆದುಕೊಳ್ಳುತ್ತಾರೆ. ಈ ಹಿನ್ನೆಲೆಯಲ್ಲಿ ಸಾಹಿತ್ಯ ಮತ್ತು ಸಾಂಸ್ಕೃತಿಕ ಲೋಕದಲ್ಲಿ ಪ್ರಾದೇಶಿಕ ಮೀಸಲಾತಿ ಅಗತ್ಯವೇ? ಅಗತ್ಯವಾದರೆ ಯಾಕೆ?**

ಕಲೆ ಎನ್ನುವುದು ನಿಸ್ಸಂದೇಹವಾಗಿ ನಿಷ್ಠುರವಾದದ್ದೇ. ಪಕ್ಷಪಾತವಿಲ್ಲದ ಕ್ಷೇತ್ರವೂ ಹೌದು. ಆದರೆ ಇದು ಆಗುತ್ತಿಲ್ಲವಲ್ಲ. ಎಲ್ಲವೂ ರಾಜಧಾನಿ ಕೇಂದ್ರಿತ. ಯಾವುದೇ ಪಕ್ಷದ ಸರಕಾರ ಬಂದರೂ ರಾಜಧಾನಿ ಕೇಂದ್ರಿತ ಸಾಹಿತಿಗಳೇ ಕಾಯಂ ಫಲಾನುಭವಿಗಳು. ಅರ್ಧರಾತ್ರಿಯಲ್ಲಿ ಕೊಡೆ ಹಿಡಿಯುವವರದ್ದೇ ದರಬಾರು. ಅಧಿಕಾರ, ಪ್ರಶಸ್ತಿ ಕೆಲವರಿಗಷ್ಟೇ ಮೀಸಲು. ಮೀಸಲಾತಿ ಎಂದರೆ ಇದೇ ಇರಬೇಕು. ಹೀಗಾಗಿ ಪ್ರಾದೇಶಿಕ ಸಮಾನತೆ ಕೇಳುವುದರಲ್ಲಿ, ಅವಕಾಶ ಪಡೆದುಕೊಳ್ಳುವಲ್ಲಿ ತಪ್ಪೇನಿದೆ. ಆದರೆ ಪ್ರಾದೇಶಿಕ ಸಮಾನತೆಯ ಜೊತೆ ಜೊತೆ ಸಾಮಾಜಿಕ ಸಮಾನತೆಯೂ ಬೇಕು. ಸಾಮಾಜಿಕ ಸಮಾನತೆಯೂ ರಾಜಧಾನಿ, ಅದರ ಸುತ್ತಮುತ್ತಲಿನ ಪ್ರದೇಶಗಳಿಗಷ್ಟೇ ಸೀಮಿತವಾಗಿದೆ. ಅಖಂಡ ಕರ್ನಾಟಕವೆಂದರೆ ಬರೀ ಬೆಂಗಳೂರು, ಮೈಸೂರು, ಮಂಗಳೂರು, ಧಾರವಾಡ, ಬೆಳಗಾವಿಯಂತಹ ಕೆಲವೇ ಜಿಲ್ಲೆಗಳಷ್ಟೇ ಅಲ್ಲ, ಇನ್ನಿತರ ಜಿಲ್ಲೆಗಳೂ ಇವೆ ಎಂಬ ಪ್ರಜ್ಞೆ ನಮ್ಮನ್ನಾಳುವವರಿಗೆ ಮತ್ತು ಸಾಂಸ್ಕೃತಿಕ, ಸಾಹಿತ್ಯಲೋಕಕ್ಕೂ ತಿಳಿದಿರಬೇಕು. ಇನ್ನಿತರ ಪ್ರದೇಶಗಳು ಅನಾದರಕ್ಕೊಳಗಾಗಿದ್ದು ಇವರ ಕಣ್ಣಿಗೆ ಕಾಣಬೇಕಿದೆ. ಪ್ರತಿಭಾವಂತ ಯಾವುದೇ ಜಾತಿಯವನಿರಲಿ, ಯಾವುದೇ ಪ್ರದೇಶದಲ್ಲಿರಲಿ ಹುಡುಕಿ ಗೌರವಿಸುವ ಕೆಲಸ ಆಗಬೇಕು.


**ವೆಂಕಟಗಿರಿ ದಳವಾಯಿ**

ಹೊಸತಲೆಮಾರಿನ ವಿಮರ್ಶಕ, ಕವಿ. ಮೂಲತಃ ಬಳ್ಳಾರಿಯವರು. 'ನಾನು–ನೀನು–ಆನು', 'ಮೇಲೊಂದು ಗರುಡ', 'ಕಪ್ಪು ವ್ಯಾಕರಣ', 'ಅಪ್ರಮಾಣ', 'ಇದು ಹೇಳಲು ಬಾರದು' ಎಂಬ ವಿಮರ್ಶಾ ಸಂಕಲನಗಳನ್ನು ಪ್ರಕಟಿಸಿದ್ದಾರೆ. ಅವರ ಕವನ ಸಂಕಲನ – 'ಅಪಮಾನಗಳಿಗಿಲ್ಲ ವಿರಾಮ'. 10ಕ್ಕೂ ಹೆಚ್ಚು ಪುಸ್ತಕಗಳನ್ನು ಸಂಪಾದಿಸಿದ್ದಾರೆ. 'ಕನ್ನಡ ರಂಗಭೂಮಿ ಮತ್ತು ಮಹಿಳೆ' ಅವರ ಪಿಎಚ್.ಡಿ. ಪ್ರಬಂಧವಾಗಿದೆ. ಪ್ರಸ್ತುತ ಹಂಪಿಯ ಕನ್ನಡ ವಿಶ್ವವಿದ್ಯಾಲಯದ ಸಾಹಿತ್ಯ ಅಧ್ಯಯನ ವಿಭಾಗದ ಮುಖ್ಯಸ್ಥರು.